

ಬಳಸಿಕೊಂಡು ಬಹು ವಿಧದಲ್ಲಿ ಬಳಸುವುದನ್ನು ರೂಢಿಸಿಕೊಂಡ ಮಾನವ ಅವುಗಳ ಚರ್ಮದಿಂದ ನಾದ ಹೊಮ್ಮಿಸುವುದನ್ನು ಕಲಿತದ್ದು ಎಂತಹ ವಿದ್ಯೆ! ಕಸದಿಂದ ರಸದ ಪಾಕ ಮಾಡುವ ಅವನ ಕೌಶಲ್ಯದ ಅನುಭವ ಅಸಾಧ್ಯವಾದುದು. ನಡೆಯುವವನಿಗೆ ನಡೆದಷ್ಟೂ ಬುದ್ಧಿ–ಭಾವದ ಅನುಭವ. ಇದು ಮನಸ್ಸಿಗೆ ಮಾತ್ರವಲ್ಲ, ಕಾಲಿಗೂ! ನಶ್ವರವಾದ ಚರ್ಮಕ್ಕೆ ಬಣ್ಣ ಕೊಡುವ 'ಮೆಲನಿನ್' ಗ್ರಂಥಿಗೆ ಅದೆಷ್ಟು ಮೌಲ್ಯವಿದೆ. ಬಣ್ಣಕ್ಕೆ ಮಾರು ಹೋಗುವ ಈ ದಿನಮಾನದಲ್ಲಿ ಬಣ್ಣ ಬದಲಿಸುವ ಜನರುಂಟೇ ಹೊರತು ಬಣ್ಣ ಬದಲಾಯಿಸುವ ಕ್ರೀಮುಗಳು ಭ್ರಮೆ ಮೂಡಿಸುತ್ತಿವೆ ಅಷ್ಟೇ. ಉಟ್ಟ ಬಣ್ಣಕ್ಕಿಂತ ತೊಟ್ಟ ಬಣ್ಣ ಹೆಚ್ಚು ಸಮಯ ಇರಲಾರದು ಅಲ್ಲವೇ? ಹಾಗೆಯೇ ಕಪ್ಪುಚರ್ಮವು ಹೊಮ್ಮಿಸುವ ನಾದವು ಅವರ್ಣನೀಯ!

ಹಿಂದೊಬ್ಬ ರಾಜನ ಕಾಲದಲ್ಲಿ ಅಕ್ಕಾತಂಗೀರು ನೀರು ತರಲು ಕೊಳಕ್ಕೆ ಹೋಗುತ್ತಿದ್ದರಂತೆ. ಅದೇ ಸಮಯಕ್ಕೆ ರಾಜ ಮಂತ್ರಿಯ ಜೊತೆ ವಿಹಾರಕ್ಕೆ ಬಂದವನು ದೇವರ ಸನ್ನಿಧಿಯಲ್ಲಿ ನಗಾರಿಯ ನಾದಕ್ಕೆ ಬೆರಗಾಗಿ ಅಲ್ಲೇ ನಿಂತನಂತೆ. ಅದಕ್ಕೆ ಆ ಹುಡುಗಿಯರು 'ಅದರಲ್ಲೇನಿದೆ ಬಿಡೆ, ಸತ್ತು ಆರು ತಿಂಗಳಾಯ್ತು, ಅವನ ದನಿ ನೋಡೇ ಎಷ್ಟು ಚಂದ ಇದೆ' ಅಂದ್ರಂತೆ. ಆ ಮಾತಿನಿಂದ ಕಕ್ಕಾಬಿಕ್ಕಿಯಾದ ರಾಜನು ಮಂತ್ರಿಯನ್ನು ಕೇಳಿದನಂತೆ, 'ಅದೇನು ಆ ಹುಡುಗಿಯರ ಮಾತಿನ ಅರ್ಥ' ಎಂದು. ಅದಕ್ಕೆ ಮಂತ್ರಿ, 'ರಾಜ, ಆರು ತಿಂಗಳು ಅಂದ್ರೆ ಎಮ್ಮೆ ಸತ್ತು ಆರು ತಿಂಗಳು ಆಯ್ತು. ಅದರ ಚರ್ಮ ನಗಾರಿಯಾಗಿ, ಈಗ ದನಿಯಾಗಿ ಬೇರೊಂದು ರೂಪದಲ್ಲಿ ಬಂದಿದೆ ಅಂತ ಅವರ ಮಾತಿನ ಅರ್ಥ' ಎಂದನಂತೆ. ರಾಜ ಅವರ ಮಾತಿನ ಒಗಟಿಗೆ ಬೆರಗಾದನಂತೆ. ಹೀಗೆ ಪ್ರಾಣಿಗಳ ಚರ್ಮದ ರೂಪಾಂತರ ಅಂದವನ್ನು ಹೆಚ್ಚಿಸಲಿಕ್ಕೆ ಅಲಂಕಾರಕ್ಕೆ ಬೆಚ್ಚಗೆ ಇರಲು ಕಂಡುಕೊಂಡ ಉಪಾಯಗಳು ಹಲವು. ಉತ್ತರ ಭಾರತದ ಚಳಿ ಸೀಮೆಯ ಜನರು ಪ್ರಾಣಿಗಳ ಚರ್ಮದ ಹೊದಿಕೆಗಳನ್ನು ಸದಾ ಹೊದ್ದುಕೊಂಡು ಇರುತ್ತಾರೆ. ಪ್ರಾಣಿಗಳ ಚರ್ಮ ಹೊದಿಕೆಗೆ ತಂಪು ತಂಪು, ಕೂಲ್ ಕೂಲ್! ಆದರೆ ಕಾನೂನು ಬಿಗಿಯಾಗಿದೆ.

ಜನಪದರ ತಿಳಿವು ಚಪ್ಪಲಿ ಕುರಿತು ಮಾತಾಡಿದ ಕುರುಹುಗಳನ್ನು 'ಊರೆಲ್ಲ ತಿರುಗ್ತತಿ ಮನೆ ಮೂಲ್ಯಾಗ್ ಬಿದ್ದಿರ್ತತಿ', 'ಕಲ್ಲನ್ನು ತುಳಿಯುತ್ತೆ, ಮುಳ್ಳನ್ನು ಮೇಯುತ್ತೆ, ನೀರು ಕಂಡ್ರೆ ನಿಲ್ಲುತ್ತೆ' ಒಗಟುಗಳಲ್ಲಿ ನೋಡಬಹುದು. ಚಪ್ಪಲಿಯನ್ನು ಕುರಿತು ಕಟ್ಟಿದ ಈ ಒಗಟುಗಳನ್ನು ಸೃಷ್ಟಿಸಿರುವ ಜನಪದರ ಸೂಕ್ಷ್ಮತೆಯನ್ನು ನೋಡಿದರೆ ಚಪ್ಪಲಿಯು ಸುತ್ತಾಡಿ ಸುತ್ತಾಡಿ ತುಳಿದು ಅಂಟಿಸಿಕೊಂಡು ಬಂದಿರುವ ವಸ್ತುವಾಗಿ ಬಿದ್ದಿರುವ ಪ್ರತ್ಯೇಕ ಜಾಗದಲ್ಲಿ ಮಾತ್ರ ನಿಲ್ಲುವಂಥದ್ದು ಎಂಬುದು ಅರ್ಥವಾಗುತ್ತದೆ. ಬಳಸಿ ಬಳಸಿ ಬಿಡುವ ನಾವು ಸ್ವಾರ್ಥಪರರು. ಆದರೆ ಹೊಸ ಕಾಲದ ಕವಿಯು 'ಚಪ್ಪಲಿಯೂ ಒಂದು ಕಲಾಕೃತಿ, ಸಮಗಾರನ ಅಭಿವ್ಯಕ್ತಿ' ಎಂದು ಕಂಡಿರುವ ಆಲೋಚನೆ ವಿಶಿಷ್ಟವಾದುದು.

ಚರ್ಮದ ಚಪ್ಪಲಿಗಳು, ಬ್ಯಾಗುಗಳು, ಬೂಟುಗಳು ಅರೆ ಮಾನವನ ಚರ್ಮಬಿಟ್ಟು ಉಳಿದೆಲ್ಲ ಪ್ರಾಣಿಗಳ ಚರ್ಮವು ಬಹು ಬೇಡಿಕೆಯದ್ದೇ! ಅಪ್ಪನ ಕಾಲದಲ್ಲಿ 'ಅಡಿ'ಗೆ ಚಪ್ಪಲಿ ಹಾಕಿಕೊಂಡು ಹೊಸಲಿನ ಹೊರಗೆ ಬಿಟ್ಟುಬರುತ್ತಿದ್ದ ನಾವು ಪಾದವನ್ನು ಒರೆಸಿಕೊಂಡು ಬರಬೇಕಿತ್ತು. ಶಾಲೆಯ ಮಾಸ್ತರುಗಳು ಯಕ್ಕಡವನ್ನು ಧರಿಸಿಕೊಂಡು ಬರುತ್ತಿದ್ದರು. ಮಳೆ ಬಂದಾಗ ಸೈಕಲ್ ಏರಿ ಬರುತ್ತಿದ್ದ ಮೇಷ್ಟ್ರ ಬೆನ್ನ ಹಿಂದಿನ ಚಿತ್ತಾರ ಹುಡುಗರಿಗೆ ಪೇಂಟಿಂಗ್ ತರ ಕಾಣಿಸುತ್ತಿತ್ತು. ಚಪ್ಪಲಿಗಳು ಮಾರುವ ಅಂಗಡಿಗಳಲ್ಲಿ ಬಂದವರ ಪಾದದ ಮುಂದೆ ಮಂಡಿ ಊರಿ ಕಾಲಿಗೆ ಜೋಡಿಸುವ ಆವನ ಸೇವೆ ಮರೆಯುವುದುಂಟೆ? ನಗರದ ಒಳಗೆ ಜೋಡಿಸಿಟ್ಟ ಅಂಗಡಿಗಳು ಚಪ್ಪಲಿಯನ್ನು ನೋಡಲು ಕನ್ನಡಿಗಳು ಆಕರ್ಷಕವಾಗಿರುತ್ತವೆ. ಮದುವೆ ದಿಬ್ಬಣದಲ್ಲಿ ವರನಿಗೆ ಪಾದ ತೊಳೆದು ಪಾದರಕ್ಷೆ ನೀಡುವ ಪದ್ಧತಿ ಬಹು ಹಿಂದಿನದು. ಪಾದ ತೊಳೆಸಿಕೊಂಡ ಅಳಿಯ ಮಾವನ ಮನೆಯನ್ನು ತೊಳೆಯದಿದ್ದರೆ ಸಾಕು! ಇಷ್ಟಾಗಿಯೂ ನಾವು ಶೋರೂಮ್‌ಗಳಲ್ಲಿ ವಹಿವಾಟು ಮಾಡುವಾಗ ಬಾಯಿ ಬಂದ್ ಮಾಡಿಕೊಳ್ಳುತ್ತಾ, ಬೀದಿ ಬದಿಯಲ್ಲಿ ಬಿಸಿಲಿಗೆ ಮೈ ಒಡ್ಡಿ ಚಪ್ಪಲಿ–ಬೂಟು ಹೊಲಪು ಮಾಡುವವನ ಮುಂದೆ ಕಣ್ಣು ಕೆಂಪಗೆ ಮಾಡಿಕೊಳ್ಳುತ್ತೇವೆ. ಆದರೆ ಸಾಧನಕೇರಿಯ ಅಜ್ಜ ಧಾರವಾಡದ ಬೀದಿಯಲ್ಲಿ 'ಮಾಸ್ತರಿಗ ಪಾದ ಸುಟ್ಟವು' ಎಂದು ಬದಲಿ ಯಕ್ಕಡ ಕೊಟ್ಟಾಗ, ಬೇಂದ್ರೆಯವರು ಆತನಿಗೆ ಕೊಡೆ ಹಿಡಿದು ನೆರಳಾದ ಕರುಣೆಯ ಪರಿ ಮತ್ತೊಂದು ಕಾವ್ಯದಂತೆಯೇ ಇದೆ.

ಮೊನ್ನೆ ನಮ್ಮ ಊರಿನ ಸಮೀಪದ ಸ್ಟೇಷನ್‌ನಲ್ಲಿ ಇಬ್ಬರೂ ಪೊಲೀಸ್ ಪೇದೆಗಳು ರಜಾ ವಿಚಾರವಾಗಿ ಚಪ್ಪಲಿಯಲ್ಲಿ ಹೊಡೆದಾಡಿಕೊಂಡ ಸುದ್ದಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಕಿರುಕುಳ ಹೆಚ್ಚಾದಾಗ ಈ ಕೋಪ ನೆತ್ತಿಗೇರಿ ಚಪ್ಪಲಿಯಲ್ಲಿ ಹೊಡೆದು ಅವಮಾನಿಸುವ ಅವನ ಅಂತರಂಗದ ತಲ್ಲಣಕ್ಕೆ ಯಾರು ಕಾರಣ? ತಿಳಿದವರು ಹೇಳಬೇಕು. ಮದುವೆ ಮನೆಯಲ್ಲಿ ಹೊಸ ಚಪ್ಪಲಿಯನ್ನು ಖದೀಮರು ಲಪಟಾಯಿಸುವರೆಂದು ಅಲ್ಲೊಂದ್ ಇಲ್ಲೊಂದ್ ಬಿಡುವುದುಂಟು. ಸಾಮಾನ್ಯವಾಗಿ ಹಳ್ಳಿಗರು ಜಾಣರು. ಜಾತ್ರೆಗಳಲ್ಲಾದರೆ ಮೆಳೆ ಮುಂಡಿಗಳೆಡೆ ಒಂದೊಂದು ಬಿಟ್ಟು ಬರುತ್ತಾರೆ. ಪ್ರೇಮಿಗಳು ದೂರ ಸರಿದಂತೆ ಒಂದೊಂದು ಚಪ್ಪಲಿಯನ್ನು ದೂರ ಇಟ್ಟು ಬಂದಿರುತ್ತಾರೆ. ಅಸಲಿಗೆ ಅವು ಒಂದನ್ನೊಂದು ಅಗಲಿದ ಪ್ರೇಮಿಗಳಂತೆ ವಿರಹ ವೇದನೆಯನ್ನು ಅನುಭವಿಸಿದರೆ ಯಾರು ಹೊಣೆ. ಮುಖಕ್ಕೆ ಎರಡು ಕಣ್ಣ ಬೆಳಕಂತೆ ಚಪ್ಪಲಿಯೂ ಕಾಲಿಗೆ ಎರಡು ಕಣ್ಣುಗಳಿದ್ದ ಹಾಗೆ.

ಒಮ್ಮೆ ನಗರಕ್ಕೆ ಪ್ರತಿಭಟನೆಗೆ ಎಂದು ಬಂದ ಸಾವಿರಾರು ಮಂದಿ ಜೋರಾಗಿಯೇ ಅಬ್ಬರಿಸಿದರು. ಎದುರು ಪೊಲೀಸರ ಬೂಟುಗಳು ಪ್ರತಿಭಟನಾಕಾರರ ಕಣ್ಣು ಕುಕ್ಕುತ್ತಿದ್ದವು. ಪಾಲಿಶ್ ಮಾಡಿದ ಕಾಲುಗಳು ಮಿಂಚುತ್ತಿದ್ದರೆ, ಮುಷ್ಕರಕ್ಕೆ ಬಂದವರ ಪಾದಗಳು ಒಡೆದ ಟಾರ್ ರಸ್ತೆಯಂತೆಯೇ ಇದ್ದವು. ಮುಷ್ಕರ ಮಗ್ಗುಲನ್ನು ಬದಲಿಸತೊಡಗಿತು. ನ್ಯಾಯ ಬೇಕು ಘೋಷಣೆ ದೊಡ್ಡ ಶಬ್ದದಲ್ಲಿ ಮೊರೆಯುತ್ತಿತ್ತು. ಎಲ್ಲಿಂದಲೋ ಕಲ್ಲುಗಳು ತೂರಿ ಬಂದವು. ದೊಂಬಿಯಾಯಿತು. ಪ್ರತಿಭಟನಾಕಾರರನ್ನು ಚದುರಿಸಲು 'ಲಾಠಿ ಚಾರ್ಜ್' ಮಾಡಿದರು. ಆ ಜನರು ಓಡುವ ರಭಸಕ್ಕೆ ಚಪ್ಪಲಿಗಳು ತನಗೆ ತಾನೇ ಕಳಚಿಕೊಂಡವು. ವಿರುದ್ಧ ದಿಕ್ಕಿನಲ್ಲಿ ಹರಿವ ನೀರಲ್ಲಿ ಈಜುವಾಗ 'ಕೌಪೀನ ಕಳಚುವಂತೆ'. ಚಪ್ಪಲಿ ಬಿಟ್ಟು ಪರಾರಿಯಾಗುವ ಪ್ರತಿಭಟನಾಕಾರರು ಲಾಠಿಯ ಏಟು ತಪ್ಪಿಸಿಕೊಳ್ಳಲು ಓಡುವ ಪರಿ ನೋಡಿದರೆ ಚಪ್ಪಲಿಗಳು ಅನಾಥಪ್ರಜ್ಞೆಯನ್ನು ಎದುರಿಸುತ್ತವೆ! 'ಬಿಟ್ಹೋಗಬ್ಯಾಡ ನನ್ನ ಬಿಟ್ಹೋಗಬ್ಯಾಡ' ಎನ್ನುವ ತಬ್ಬಲಿತನವನ್ನು ಅನುಭವಿಸುತ್ತವೆ. ಆ ಪ್ರತಿಭಟನೆಗೆ ನಮ್ಮೂರಿನ ಬೇತಾಳಿಯೂ ಹೋಗಿದ್ದ. ಕಳಚಿ ಬಿದ್ದ ಚಪ್ಪಲಿಗಳ ರಾಶಿ ನೋಡಿ ತನ್ನ ಕಾಲುಗಳು ನೆನಪಾದವು. ಮನೆ ಮಕ್ಕಳ ಕಾಲುಗಳು ನೆನಪಾದವು. ಎಂದೂ ನೋಡಿರದ ಅಷ್ಟೊಂದು ಚಪ್ಪಲಿಗಳು ಕಣ್ಣು ಕುಕ್ಕಿದವು.

ಲಾಠಿ ಚಾರ್ಜ್ ಹುಕುಂಗೆ ಪೊಲೀಸಪ್ಪಗಳು ಸೊಪ್ಪು ತರಿದಂತೆ ಲಾಠಿ ಬೀಸತೊಡಗಿದಾಗ ಕೆಲವರ ಚಡ್ಡಿ ಹರಿದರೆ, ಇನ್ನು ಕೆಲವರ ಪಂಚೆ ಲುಂಗಿಗೆ ಬಿದ್ದ ಏಟಿಗೆ ಬಾಸುಂಡೆ ಕಾದ ಕಬ್ಬಿಣದಂತೆ ಎದ್ದವು. ಇದೆಲ್ಲವನ್ನು ಗಮನಿಸುತ್ತಿದ್ದ ಒಬ್ಬ ಬಿಟ್ಹೋಗಿದ್ದ ಚಪ್ಪಲಿಗಳನ್ನು ಚಿಂದಿ ಆಯುವಂತೆ ಒಂದು ಚೀಲದ ತುಂಬಾ ತುಂಬಿಸಿಕೊಂಡು ಜಾಗ ಖಾಲಿ ಮಾಡಿದನು. ಕಿರಿದಾದ 'ಚರ್ಮ ಕುಟೀರ'ದ ಎದುರೇ ನಡೆದ ಈ ಪ್ರತಿಭಟನೆಯನ್ನು ನೋಡುತ್ತಾ ಚಪ್ಪಲಿ ಹೊಲಿಯುತ್ತಾ ಇದ್ದ ಆ ವ್ಯಕ್ತಿಯು ಅಂಬೇಡ್ಕರ್ ಭಾವಚಿತ್ರವನ್ನೇ ಎದುರು ನೋಡುತ್ತಾ ಕಣ್ಣೀರು ತಂದುಕೊಂಡ. ಮುಷ್ಕರನಿರತ ಜನರು ಬೀಸಿದ ಕಲ್ಲುಗಳು ಬೀಳುತ್ತಾ ಒಂದೆರಡು ಕುಟೀರದ ಬಾಗಿಲಿಗೆ ಬಡಿದವು. ನಿಧಾನವಾಗಿ ಶಟರ್ ಎಳೆದು ಒಳ ಹೊಕ್ಕ ಆತ ಮಲಗಲು ಆಗದೆ, ಕೂರುವುದಕ್ಕೂ ಆಗದೆ, ಕುಂತಲ್ಲೇ ಕುಂತು ಬಿಟ್ಟ, ಅದೇ ಬಾಬಾ ಸಾಹೇಬರ ನೋಡುತ್ತಾ. ಹೊರಗೆ ರಾಶಿ ರಾಶಿಯಾಗಿ ಬಿದ್ದ ಚಪ್ಪಲಿಯನ್ನು ಮುಟ್ಟಲಾಗದೆ ಅವರ ಪಾದಗಳನ್ನೇ ಧ್ಯಾನಿಸುತ್ತಾ ಸಂಜೆ ಸಮೀಪಿಸುತ್ತಿದ್ದಂತೆ ಆ ಕಿರಿದಾದ ಚಿಕ್ಕ ಕುಟೀರದೊಳಗೆ ಚಪ್ಪಲಿಯ ಜೊತೆ ಕರಗಿ ಕಪ್ಪಾದ!



ಪ್ರತಿಕ್ರಿಯಿಸಿ: **feedback@sudha.co.in**